# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ) ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು -02.**

ಸಂಖ್ಯೆ: ಜಂನಿನಯೋ (ದ)/ಪ್ರಾಪ/ಸನಿ/10 /2022-23                                   ದಿನಾಂಕ: 06-03-2023.

**ಭಾಗಶಃ ಪ್ರಾರಂಭಿಕ ಪ್ರಮಾಣ ಪತ್ರ**

ವಿಷಯ: ಖಾತಾ ಸಂಖ್ಯೆ: 8/1, ಸರ್ವೆ ಸಂಖ್ಯೆ 94/1, 94/2 & 94/3, ಯಶವಂತಪುರ ವಿಲೇಜ್, ಯಶವಂತಪುರ ಹೋಬಳಿ ಬೆಂಗಳೂರು ದಕ್ಷಿಣ ತಾಲೂಕು, ವಾರ್ಡ್ ನಂ 38, ರಾಜರಾಜೇಶ್ವರಿನಗರ ವಲಯ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ಬ್ಲಾಕ್-ಬಿ (2) ವಾಣಿಜ್ಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ (ಭಾಗಶಃ) ನೀಡುವ ಬಗ್ಗೆ.

ಉಲ್ಲೇಖ: 1) ತಮ್ಮ ಮನವಿ ಪತ್ರ ದಿನಾಂಕ: 02-12-2022.

2) ಕಟ್ಟಡದ ನಕ್ಷೆ ಮಂಜೂರಾತಿ ಎಲ್.ಪಿ ಸಂಖ್ಯೆ: BBMP/ Addl.Dir/JD South/LP/ 0022/20-21 ದಿನಾಂಕ: 23-09-2021.

3) ಅಪರ ನಿರ್ದೇಶಕರು, ನಗರ ಯೋಜನೆ ರವರ ಅನುಮೋದನೆ ದಿನಾಂಕ: 04-03-2023.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಮನವಿಯಲ್ಲಿ ಖಾತಾ ಸಂಖ್ಯೆ: 8/1, ಸರ್ವೆ ಸಂಖ್ಯೆ 94/1, 94/2 & 94/3, ಯಶವಂತಪುರ ವಿಲೇಜ್, ಯಶವಂತಪುರ ಹೋಬಳಿ ಬೆಂಗಳೂರು ದಕ್ಷಿಣ ತಾಲೂಕು, ವಾರ್ಡ್ ನಂ 38, ರಾಜರಾಜೇಶ್ವರಿನಗರ ವಲಯ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ಬ್ಲಾಕ್-ಬಿ (2) ರಲ್ಲಿ 3ತಳ + ನೆಲ + ಮೇಲಿನ 17 ಅಂತಸ್ತುಗಳ ವಾಣಿಜ್ಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ (ಭಾಗಶಃ) ನೀಡಲು ಕೋರಿರುತ್ತಾರೆ. ಉಲ್ಲೇಖ (2) ರಂತೆ ಸದರಿ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ. ಸಂಖ್ಯೆ: BBMP/ Addl.Dir/JD South/LP/0021/19-20 ದಿನಾಂಕ: 23-09-2021 ರಂದು ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಬ್ಲಾಕ್-ಬಿ (2) ವಾಣಿಜ್ಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ (ಭಾಗಶಃ) ನೀಡುವ ಪ್ರಸ್ತಾವನೆಗೆ ಉಲ್ಲೇಖ (3) ರಂತೆ ಅಪರ ನಿರ್ದೇಶಕರು, ನಗರ ಯೋಜನೆ ರವರು ಅನುಮೋದಿಸಿದ ಮೇರೆಗೆ ಪ್ರಾರಂಭಿಕ ಪ್ರಮಾಣ ಪತ್ರ (ಭಾಗಶಃ) ನೀಡುವ ಸಂಬಂಧ ಅಗತ್ಯ ಶುಲ್ಕವಾದ ರೂ. 7,20,000/- ಗಳನ್ನು ಅರ್ಜಿದಾರರಿಂದ ರಶೀದಿ ಸಂಖ್ಯೆ: RE-ifms624-TP/000072 ದಿನಾಂಕ: 06-03-2023 ರಂದು ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ಬ್ಲಾಕ್-ಬಿ (2) ವಾಣಿಜ್ಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತಿಗೊಳಪಡಿಸಿ ಪ್ರಾರಂಭಿಕ ಪ್ರಮಾಣ ಪತ್ರ (ಭಾಗಶಃ) ವನ್ನು ನೀಡಲಾಗಿದೆ.

1) ಪ್ರಾರಂಭಿಕ ಪ್ರಮಾಣ ಪತ್ರ (ಅಂತಿಮ) ಪಡೆಯುವ ಮುನ್ನ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರಿಂದ ಭೂಪರಿವರ್ತನಾ ಆದೇಶ ಹಾಗೂ ರೇರಾ ಪ್ರಾಧಿಕಾರದಲ್ಲಿ ನೊಂದಣಿಯಾಗಿರುವ ಪತ್ರವನ್ನು ಸಲ್ಲಿಸುವುದು.
2) ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.

3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಯಾವುದೇ ತೊಂದರೆ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರ ವಸತಿಗಾಗಿ ತಾತ್ಕಾಲಿಕ ಶೆಡ್ ಮತ್ತು ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

4) ನಕ್ಷೆ ಮಂಜೂರಾತಿಯ ಸಿಂಧುತ್ವವು ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

5) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಮಂಜೂರಾತಿ ನೀಡುವ ಪ್ರಾಧಿಕಾರದವರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

6) ಅಭಿವೃದ್ಧಿದಾರರು / ಮಾಲೀಕರು / ವಾಸ್ತುಶಿಲ್ಪಿಯವರು ನಕ್ಷೆ ಮಂಜೂರಾತಿ ನೀಡಿದ ಸಮಯದಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.

7) ಅಭಿವೃದ್ಧಿದಾರರು / ಮಾಲೀಕರು / ವಾಸ್ತುಶಿಲ್ಪಿಯವರು ಪ್ರಾರಂಭಿಕ ಪ್ರಮಾಣಪತ್ರ ಅನುಮೋದಿಸುವ ಸಮಯದಲ್ಲಿ ವಿಧಿಸಿರುವ ವಿಶೇಷ ಷರತ್ತಿಗೆ ಬದ್ಧರಿರತಕ್ಕದ್ದು.

V. [signature] 6/3/23

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[signatures] 06/03/23 6/3/23

ಗೆ

DNR Corporation Pvt Ltd.,
Micro Infrastructure India Pvt Ltd.,
M/s. Krishna Priya Estates Pvt. Ltd.,
# 304, Queens Corner Apartment,
Aueens Road, Bangalore – 560 001.

[signatures] 6/3/23